SRI M. Y. GHORPADE.—The entire revenue machinery is used for this purpose. Though the Assistant Commissioner has been given power, he in turn tells the Tahsildar, and the Tahsildar in turn tells the Revenue Inspector. Whenever the Revenue Inspector and the Tahsildar go to a village, the instructions are that they should detect whether there is any old person in the village who deserves to get pension and who is not getting it. Lot of publicity has also been given to the programme through the political parties. Members belong to all political parties know about it. Whenever the Revenue authorities go to the village, always one or two old people come or they are brought by public workers and pointed out to the officials. This is how it is working in practice. It is commendable that the bluk of the pensioners have been located in the last 2 years. These pensioners are located at an average of 20,000 per annum in the last 2 years. It proves that the programme has made good progress.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಅಪ್ಲಿಕೇಷನ್‌ಗಳು ಬಂದ ತಕ್ಷಣ ಮಂಜೂರು ಮಾಡಿದ್ದೇವೆ ಎಂದು ಹೇಳಿದ್ದಿರಿ. ಒಂದು ಅಥವಾ ಒಂದೂವರೆ ವರ್ಷಗಳಿಂದ ಪೆಂಡಿಂಗ್ ಕೇಸಸ್ ಎಷ್ಟು ಇವೆ ? ಅಂಥ ಕಡೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದಿಷ್ಟವಾದ ಆರ್ಡರ್ ಕಳುಹಿಸುವುದಾಗಲಿ ಅಥವಾ ಇಲ್ಲಿಂದ ಪತ್ರ ಬರೆದು ಪೆಂಡಿಂಗ್ ಕೇಸ್‌ಗಳನ್ನು ಆದಷ್ಟು ಜಾಗ್ರತೆ ತೀರ್ಮಾನ ಮಾಡುವುದಕ್ಕೆ ಸೂಕ್ತ ನಿರ್ದೇಶನ ಕೊಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ಒಂದು ತಿಂಗಳಿನಿಂದ ಎಷ್ಟು ಪೆಂಡಿಂಗ್ ಇವೆ, ೩ ತಿಂಗಳಿನಿಂದ ಎಷ್ಟು ಪೆಂಡಿಂಗ್ ಇವೆ, ೬ ತಿಂಗಳಿಂದ ಎಷ್ಟು ಪೆಂಡಿಂಗ್ ಇವೆ ಎಂಬುದನ್ನು ಲೆಕ್ಕ ಇಡುತ್ತೇವೆ. ಈಗ ಯಾವ ತಿಂಗಳಿಗೆ ಜಿಲ್ಲೆಯಲ್ಲಿ ಎಷ್ಟು ಪೆಂಡಿಂಗ್ ಇವೆ ಎಂಬುದರ್ನು ಲೆಕ್ಕ ಹಾಕಿ ಹೇಳಬಹುದು. ಒಂದೊಂದು ಕಡೆ ೩ ತಿಂಗಳಿಗಿಂತ ಜಾಸ್ತಿ ಆಗಿದ್ದರೆ ಅಂಥ ಸಮಯದಲ್ಲಿ ಸಂಬಂಧ ಪಟ್ಟ ಅಧಿಕಾರಿಗಳನ್ನು ಎಕ್ಸ್‌ಪ್ಲನೇಷನ್ ಕೇಳುತ್ತೇನೆ. ಸಾಮಾನ್ಯವಾಗಿ ೩ ತಿಂಗಳಿಗಿಂತ ಹೆಚ್ಚು ಕಾಲಾ ಪೆಂಡಿಂಗ್ ಇರತಕ್ಕಂಥ ಕೇಸುಗಳು ಬಹಳ ಕಡಿಮೆ ಇವೆ. ಮಾನ್ಯಸದಸ್ಯರು ಹೇಳುವಂತೆ ಯಾವುದಾದರೂ ಅಂತಹ ಕೇಸುಗಳು ಇದ್ದರೆ ಅದನ್ನು ಸರ್ಕಾರದ, ಗಮನಕ್ಕೆ ತಂದರೆ ತಕ್ಷಣ ಡೆಪ್ಯೂಟಿ ಕಮಿಷನರ್ ಅವರಿಗೋ, ಅಸಿಸ್ಟೆಂಟ್ ಕಮಿಷನರ್‌ರವರಿಗೋ ತಿಳಿಸಿ ಆದಷ್ಟು ಜಾಗ್ರತೆ ಡಿಸ್‌ಪೋಸಲ್ ಆಗುವ ರೀತಿಯಲ್ಲಿ ಮಾಡುತ್ತೇವೆ.

Old Age Pension Cases Pending in Chintamani Taluk

409 SRI CHOWDA REDDY (Chintamani)—

Will the Minister for Finance and Housing be pleased to state:—

(*a*) the number of persons in the State to whom old age pensions are being paid by Government ;

(*b*) the number of perons in Chintamani Taluk whose old age pension applications are pending ;

(*c*) the reasons for the same ; the number of applications received by the Government from the people of this Taluk since 1972 ; out of them, the number of applications in respect of which pension has been sanctioned ?

SRI M. Y. GHORPADE (Minister for Finance and Housing).—

(*a*) 49,190 persons in the State are being paid old age pensions by the Government.

(*b*) 64 old age pension applications are pending disposal as on 1-1-1975 in Chintamani Taluk.

(*c*) 1. Non-availablity of petitioners at the place of enquiry by the Revenue Inspector.

2. Non-productions of certificate regarding age from the Doctors.

3, In certain cases the Tahsildar has to conduct a personal enquiry of petitioners.

A total number of 1157 applications have been received from the said Taluk from 1-1-1972 to 31-12-1974 and out of them, 604 cases have been sanctioned.

ಶ್ರೀ ಚೌಡಾರೆಡ್ಡಿ.— ಸ್ವಾಮಿ ೧-೧-೧೯೭೨ ರಿಂದ ೩೧-೧೨-೧೯೭೪ರವರೆಗೆ ಎಷ್ಟು ಅರ್ಜಿಗಳು ಬಂದಿವೆ ಎಂದು ಕೇಳಿದ್ದಕ್ಕೆ ೧೧೫೭ ಅರ್ಜಿಗಳು ಬಂದಿದ್ದು ಅದರಲ್ಲಿ ೬೦೪ ಮಂಜೂರು ಆಗಿದೆ ಎಂದು ಹೇಳುತ್ತೀರಿ, ಅದಕ್ಕೂ ಹಿಂದೆ ಎಷ್ಟು ಕೇಸುಗಳು ಮಂಜೂರು ಆಗಿವೆ ?

† ಶ್ರೀ ಎಂ. ವೈ. ಘೋರ್ಪಡೆ.—ನನ್ನ ಕಡೆ ಇರುವ ಮಾಹಿತಿ ಪ್ರಕಾರ ಚಿಂತಾಮಣಿ ತಾಲ್ಲೂಕಿನಲ್ಲಿ ೧-೧-೧೯೭೨ ರಿಂದ ೩೧-೧೨-೧೯೭೪ ರ ವರೆಗೆ ೧೧೫೭ ಅರ್ಜಿಗಳು ಬಂದಿದ್ದು ಅದರಲ್ಲಿ ೬೦೪ ಸ್ಯಾಂಕ್ಷನ್ ಆಗಿವೆ. ಮತ್ತು ತಿರಸ್ಕೃತಲಾಗಿರತಕ್ಕಂಥಾದ್ದು ೪೮೯. ಪೆಂಡಿಂಗ್ ಇರತಕ್ಕಂಥಾದ್ದು ೬೪ ಕೇಸ್‌ಗಳು. ಮಾತ್ರ. ಈ ೬೪ ಕೇಸ್‌ಗಳೂ ಡಿಸೆಂಬರ್ ಅಪೈರ್‌ನಲ್ಲಿ ಬಂದಿರುವುವು. ಅದರಲ್ಲೂ ಕೂಡ ೧೪ ಮಂಜೂರಾಗಿ ೪೬ ಕೇಸ್‌ಸ್ ತಮ್ಮ ತಾಲ್ಲೂಕಿನಲ್ಲಿ ಪೆಂಡಿಂಗ್ ಉಳಿದಿವೆ.

ಶ್ರೀ ಚೌಡಾರೆಡ್ಡಿ.—೧೯೭೨ನೇ ಇಸವಿಗೆ ಮುಂಚೆ ಎಷ್ಟು ಜನಕ್ಕೆ ಕೋಡುತ್ತಿದ್ದೀರಿ ?

ಶ್ರೀ ಎಂ. ವೈ. ಘೋರ್ಪಡೆ.—ಆ್ಯನ್ಯುಯಲ್ ಬ್ರೇಕಪ್ ನನ್ನ ಕಡೆ ಇಲ್ಲ. ಒಟ್ಟು ೬೦೪ ಮಂಜೂರು ಆಗಿದ್ದು ಮಾತ್ರ ಇದೆ. ಯಾವ ವರ್ಷದಲ್ಲಿ ಎಷ್ಟು ಆಗಿದೆ ಎನ್ನುವುದು ಇಲ್ಲ. ನಾನು ಆಗಲೇ ಇನ್ನೊಬ್ಬ ಮಾನ್ಯ ಸದಸ್ಯರಿಗೆ ಉತ್ತರ ಹೇಳುವಾಗ ನಮ್ಮ ರಾಜ್ಯದಲ್ಲಿ ೪೯ ಸಾವಿರ ಪೆನ್‌ಷನ್ ದಾರರು ಇದ್ದರು. ೧೯೭೨ನೇ ಇಸವಿಗೆ ಮುಂಚಿತವಾಗಿ ೧೬ ಸಾವಿರ ಪೆನ್‌ಷನ್‌ದಾರರು ಇದ್ದರು. ಈಗ ನನ್ನಲ್ಲಿ ಸರಿಯಾದ ಅಂಕಿ ಇಲ್ಲ. ಬೇಕಾದರೆ ಕೊಡುತ್ತೇನೆ.

SRI J. P. SARWESH.—Is there any proposal to give pension to disabled persons who have not resorted to begging and who are left uncared for by their children ?

SRI M. Y. GHORPADE.—Such of those parents who are 65 years old are being sanctioned pension as per rules. In some cases the people who are 60 years of age are also given under special circumstances.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ಳಿರೆ ಅರ್ಜಿಗಳು ಪೆಂಡಿಂಗ್ ಇವೆ ಎಂದು ತಾವು ತಿಳಿಸಿದಿರಿ. ಅದರಲ್ಲಿ ಲಾಂಗೆಸ್ಟ್ ಪೆಂಡಿಂಗ್ ಯಾವುದು ಎಂಬುದನ್ನು ಹೇಳುತ್ತೀರಾ ? ಇದಕ್ಕೆ ಕಾರಣ ಏನು ? ಅರ್ಜಿ ಬಂದ ಇಷ್ಟು ದಿವಸದೊಳಗಾಗಿ ತೀರ್ಮಾನ ಮಾಡಬೇಕೆಂದು ನಿರ್ದೇಶನ ಕೊಡಬೇಕು. ಮತ್ತು ಪೆಂಡಿಂಗ್ ಇರುವುದನ್ನು ಆದಷ್ಟು ಜಾಗ್ರತೆ ಡಿಸ್‌ಪೋಸ್ ಮಾಡಲು ನಿರ್ದೇಶನ ಕೊಡಬೇಕು.

ಶ್ರೀ ಎಂ. ವೈ. ಘೋರ್ಪಡೆ.— ಎಷ್ಟು ತಿಂಗಳಿಂದ ಕೇಸಸ್ ಪೆಂಡಿಂಗ್ ಇವೆ ಎಂಬುದನ್ನು ನೋಡುತ್ತೇವೆ. ಆಗಿಂದಾಗ್ಗೆ ತಹಸೀಲ್ದಾರರಿಂದ ಪಟ್ಟಿಯನ್ನು ತರಿಸಿಕೊಂಡು ವಾಚ್ ಮಾಡುತ್ತಾ ಇರಬೇಕು, ಆದಷ್ಟು ಮಟ್ಟಿಗೆ ೩ ತಿಂಗಳಲ್ಲಿ ಆ ಕೇಸ್‌ಗಳನ್ನು ಡಿಸ್‌ಪೋಸ್ ಮಾಡಬೇಕು. ಅರ್ಜಿಗಳನ್ನು ಅಕ್ಸೆಪ್ಟ್ ಮಾಡಿ ಪೆನ್‌ಷನ್‌ದಾರರಿಗೆ ಪೆನ್‌ಷನ್ ಕೊಡಿ ಆಥವಾ ರಿಜೆಕ್ಟ್ ಮಾಡುವಂತಿದ್ದರೆ ಅದನ್ನಾದರೂ ಮಾಡಿ ಸುಮ್ಮನೆ ಉಳಿಸಿದರೆ ಪೆಂಡಿಂಗ್ ಫಿಗರ್ಸ್ ಜಾಸ್ತಿ ಕಾಣುತ್ತದೆ ಎಂದೂ ಪದೇ ಪದೇ ಡೆಪ್ಯುಟಿ ಕಮಿಷನರ್, ಅಸಿಸ್ಟೆಂಟ್ ಕಮಿಷನರ್‌ನವರಿಗೆ ಹೇಳುತ್ತಿದ್ದೇವೆ. ಚಿಂತಾಮಣಿ ತಾಲ್ಲೂಕಿನಲ್ಲಿ ೬೪

ಕೇಸ್‌ಸ್ ಇದ್ದುದು ಈಗ ೆಲಕ್ಕೆ ಇಳಿದಿದೆ. Since how many months each of these cases are pending I do not know. You may take it that most of these 48 cases would not be pending for more than 3 months. There may be a few cases which may have exceeded 3 months. Most of the cases are pending below 3 months.

ಶ್ರೀ ಚೌಡಾರೆಡ್ಡಿ.— ಸ್ವಾಮಿ, ನಾನು ಇತ್ತೀಚೆಗೆ ಕೆಲವು ಊರುಗಳಿಗೆ ಹೋದಾಗ ನೋಡಿದೆ, ಕೆಲವರು ವಯಸ್ಸಾದ ತಂದೆತಾಯಿಯವರಿಗೆ ಮೇಜರ್ ಮಕ್ಕಳಿದ್ದರೂ ಆ ಮಕ್ಕಳು ಇವರಿಗೆ ಊಟ ಹಾಕುವುದಿಲ್ಲ. ಅಂಥವರು ಬೀದಿಯಲ್ಲಿ ಬಿಕ್ಷೆ ಮಾಡುತ್ತಾ ಇರುತ್ತಾರೆ. ಆವರು ತಹಸೀಲ್ದಾರರನ್ನು ಕೇಳಿದರೆ ನಿಮಗೆ ಮೇಜರ್ ಮಕ್ಕಳಿದ್ದಾರೆ ಅದ್ದರಿಂದ ನಿಮಗೆ ಕೊಡುವುದಿಲ್ಲವೆಂದು ಹೇಳುತ್ತಾರೆ. ಅಂಥವರ ವಿಷಯದಲ್ಲಿ ಏನು ಮಾಡುತ್ತೀರಿ ಸ್ವಾಮಿ?

SRI M. Y. GHORPADE.— The point is according to rules there must not be any major son to take care of their parents. There may be some hard cases where the major sons are not taking care of their old parents and such cases cannot be fitted into the rules. However we have told our Officers to take a realistic and human view within the frame work of the rules. More than that I cannot say.

Rise in Prices of Chemical Fertilisers

378. SRI K. H. HANUME GOWDA (Hassan).— Will the Minister for Agricultural and Animal Husbandry be pleased to state:—

the extent of rise in prices of the Chemical Fertilisers like Amonium Sulphate, Urea, Super Phosphate and Potash used by the farmers during 1972-73, 1973-74 and 1974-75 (Yearwise detail may be furnished)?

SRI N. CHICKKE GOWDA (Minister for Agriculture and Animal Husbandry):—

(*a*) Details are furnished in this statement appended.

STATEMENT

Showing the prices of the Chemical Fertiliesrs during 1972-73, 1973-74 and 1974-75 were as follows:—

	Per tonne (in Rupees)		
	1972-73	*1973-74*	*1974-75*
1. Amonium Sulphate	560	600	935
2. Urea	959	1,050	2,000
3. Superphosphate	400	475	1,000
4. Potash	543	670	1,230

The above prices are exclusive of Sale Tax, Octroi and other local taxes.